# ಯಂತ್ರ ದೊರಕಿತು ಯೋಗ ಯಂತ್ರ ಸಿಕ್ಕಿತು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 470.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 316.
3. **Note:** Lyrics given without highlights are as per Ref. 1. There are few differences with Ref. 2. These difference in wordings of Ref. 2 are mentioned in yellow highlights.
4. **Note:** Singer has followed wordings as in Ref. 2.

ರಾಗ: ಶಂಕರಾಭರಣ ತಾಳ: ಛಾಪು

ಯಂತ್ರ ದೊರಕಿತು, ಯೋಗ
ಯಂತ್ರ ಸಿಕ್ಕಿತು || ಪ ||

ಯಂತ್ರವಾಹಕ ನಾರಾಯಣನ
ಅಂತರಂಗದಿ ನೆನೆಸುವಂಥ || ಅಪ ||

ಆಸೆಯಿಂದ ಮುಣುಗುವುದಲ್ಲ
ಕ್ಲೇಶಬಟ್ಟು ತಿರುಗುವುದಲ್ಲ
ವಾಸುದೇವನೆಂಬುವ ಮಹಾ (ವಾಸುದೇವ ಕೃಷ್ಣನೆಂಬ)
ಶಾಶ್ವತವಾದ ದಿವ್ಯನಾಮ || 1 ||

ಹಾಸಬಹುದು ಹೊದ್ದಬಹುದು
ಸೂಸಿ ಒಡಲ ತುಂಬಬಹುದು
ಮೋಸಹೋಗಗೊಡುವುದಲ್ಲ (ದಾಸರನ್ನು ಬಿಡದೆ ಪೊರೆವ
ಶಾಶ್ವತವಾದ ದಿವ್ಯನಾಮ || 2 || ಶ್ರೀಶನೆಂಬ ದಿವ್ಯನಾಮ)

ಒಂದು ಬಾರಿ ಸ್ಮರಿಸಿದರೆ
ಒಂದು ಕೋಟಿ ಜಪದ ಫಲವು (ಒಂದು ಕೋಟಿ ಯಜ್ಞ ಫಲವು

| | |
|---|---|
| ಸಾಧಿಸಲು ಕೈವಲ್ಯ ಪ್ರಾಪ್ತಿ | ಇಂದಿರೇಶ ಪುರಂದರ |
| ಪುರಂದರ ವಿಠಲನ ನಾಮ ‖ 3 ‖ | ವಿಠಲನೆಂಬ ದಿವ್ಯನಾಮ) |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ನಾಮಸ್ಮರಣೆಯೆನ್ನುವುದು ಒಂದು ಯಂತ್ರ; ಸಾಧನ. ಈ ಸಾಧನೆಯನ್ನು ಪ್ರೇರಿಸಿ, ನಡೆಸುವವನು ಅವನೇ ಆದ್ದರಿಂದ ಅವನು 'ಯಂತ್ರವಾಹಕ,' ನಾಮಸ್ಮರಣೆ ಬರಿಯ ಬಾಯಿಂದ ಜರುಗುವ ಕ್ರಿಯೆಯಲ್ಲ; ಮನಸ್ಸಿನ ವ್ಯಾಪಾರವೆಂಬುದನ್ನು ಕಾಣಿಸಲು 'ಅಂತರಂಗದಿ' ಎಂದಿದ್ದಾರೆ.

**Classification:** Keerthane
**Ankita:** purandara vittala
**Location:** NA
**Category:** Nama Smarane
**Sub-Category:** Narayana, Vasudeva, Krishna, divya, mosa, smarane, japa, phala, vaikunta, yagna,
**Pravachana:** NA
**Explanation:** NA